**ಅಪರ ಸಿವಿಲ್ ಮತ್ತು ಜೆಎಂಎಫ್ಸಿ ನ್ಯಾಯಾಲಯ, ಚನ್ನಪಟ್ಟಣ**

**ಪ್ರಕರಣ ಸಂಖ್ಯೆಃ ಸಿ.ಸಿ.4186/2022**

**ದಿನಾಂಕಃ** 20.09.2025

**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**

**ಪ್ರಾ.ಸಾಃ** 1 **(ಚಾ.ಸಾ.**1 **)**

| | | |
|---|---|---|
| **ಹೆಸರು** | ಃ | **ಭೀಮರಾಯ ದಳವಾಯಿ** |
| **ತಂದೆಯ ಹೆಸರು** | ಃ | **ಸಿದ್ದಪ್ಪ ದಳವಾಯಿ** |
| **ವಯಸ್ಸು** | ಃ | 33 **ವರ್ಷ** |
| **ಉದ್ಯೋಗ** | ಃ | **ಪಿಸಿ -** 281, **ಚನ್ನಪಟ್ಟಣ ಟೌನ್ ಠಾಣೆ** |
| **ವಾಸ ಸ್ಥಳ** | ಃ | **ಚನ್ನಪಟ್ಟಣ** |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನಾನು 2019 ರಿಂದ ಜೂನ್ 2025 ರವರೆಗೆ ಚನ್ನಪಟ್ಟಣ ಟೌನ್ ಠಾಣೆಯಲ್ಲಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ತಾಃ 13.07.2021 ರಂದು ಯಾರಬ್‌ನಗರ ಕ್ರಾಸ್ ಬಳಿ ನಾನು ಮತ್ತು ಚಾಸಾ.2ರವರನ್ನು ಚೆಕ್ ಪೋಸ್ಟ ಕರ್ತವ್ಯಕ್ಕೆ ರಾತ್ರಿ 8 ಗಂಟೆಯಿಂದ ನೇಮಿಸಿದ್ದರು. ವಾಹನಗಳನ್ನು ತಪಾಸಣೆ ಮಾಡುತ್ತಿರುವಾಗ ರಾತ್ರಿ ಸುಮಾರು 9.15 ಗಂಟೆ ಸಮಯದಲ್ಲಿ ಮೈಸೂರು ಕಡೆಯಿಂದ ಒಂದು ಟಾಟಾ ಏಸ್ ವಾಹನ ಬಂತು. ಸದರಿ ವಾಹನವನ್ನು ನಿಲ್ಲಿಸಿ, ನಾವು ಪರಿಶೀಲನೆ ಮಾಡಿದಾಗ ಅದರಲ್ಲಿ ಎರಡು ನಾಟಿ ಹಸುಗಳಿದ್ದವು. ಸದರಿ ಹಸುಗಳ ಬಗ್ಗೆ ವಾಹನದ ಚಾಲಕನನ್ನು ವಿಚಾರಿಸಿದಾಗ, ತನ್ನ ಹೆಸರು ನಂದೀಶಕುಮಾರ ಎಂದು ಹಾಗೂ ಸದರಿ ಹಸುಗಳನ್ನು ರಾಮನಗರದ ಬಕ್ರೀದ್ ಹಬ್ಬದ ಪ್ರಯುಕ್ತ ಕಟಾವುಗಾಗಿ ತೆಗೆದುಕೊಂಡು ಹೋಗುತ್ತಿದ್ದೆವು ಎಂದು ತಿಳಿಸಿದ್ದಾಗ, ವಾಹನದ ಕ್ಲೀನರ್ ಓಡಿ ಹೋದನು.

ಓಡಿ ಹೋದವನ ಬಗ್ಗೆ ವಿಚಾರಿಸಿದಾಗ ಆತನ ಹೆಸರು ಅನ್ಸಾರಿ ಎಂದು ತಿಳಿಸಿದನು. ಹಸುಗಳನ್ನು ಸಾಗಿಸಲು ಪರವಾನಿಗೆ ಇದೆಯಾ ಎಂದು ವಿಚಾರಿಸಿದಾಗ ಇಲ್ಲ ಎಂದು ತಿಳಿಸಿರುತ್ತಾನೆ.

ನಂತರ ವಾಹನ, ಹಸು ಮತ್ತು ಆರೋಪಿಯೊಂದಿಗೆ ಠಾಣೆಗೆ ಹೋಗಿ ಚಾಸಾ.8 – ಅನಿಲ್ ಕುಮಾರ್ ಎಸ್‌ಹೆಚ್‌ಓರವರ ಮುಂದೆ ಹಾಜರುಪಡಿಸಿ, ವರದಿ ಮಾಡಿರುತ್ತೇನೆ. ಸಾಕ್ಷಿ ಗುರುತಿಸಿದ

ವರದಿ/ಫಿರ್ಯಾದನ್ನು ಈಗ ನಿಪಿ.1 ಎಂತಲೂ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

ಮರುದಿನ ಬೆಳಿಗ್ಗೆ ತನಿಖಾಧಿಕಾರಿಗಳು ಕೃತ್ಯ ನಡೆದ ಸ್ಥಳದಲ್ಲಿ ಸ್ಥಳ ಮಹಜರ ಮಾಡಿರುತ್ತಾರೆ. ಸಾಕ್ಷಿ ಗುರುತಿಸಿದ ಸ್ಥಳ ಮಹಜರನ್ನು ಈಗ ನಿಪಿ.2 ಎಂತಲೂ ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

ನಂತರ ತನಿಖಾಧಿಕಾರಿಗಳು ಮಹಜರ ಕ್ರಮ ಜರುಗಿಸಿ, ಹಸುಗಳು ಮತ್ತು ವಾಹನವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಸಾಕ್ಷಿ ಗುರುತಿಸಿದ ಅಮಾನತ್ತು ಮಹಜರನ್ನು ಈಗ ನಿಪಿ.3 ಎಂತಲೂ ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು.

ಸಿಸಿ ನಂ.4186/2022 ರಲ್ಲಿ ಹಾಜರುಮಾಡಿರುವ ನಿಪಿ 4 ಮತ್ತು 5 ಫೋಟೋದಲ್ಲಿ ಕಾಣುವ ಟಾಟಾ ಏಸ್ ವಾಹನ ಸಂ ಃ ಕೆ ಎ 05 ಎ ಸಿ 6550 ಮತ್ತು ನಿಪಿ 6 ಫೋಟೋದಲ್ಲಿ ಕಾಣುವ 2 ಹಸುಗಳನ್ನು ನೋಡಿ ಸಾಕ್ಷಿಯು ಗುರುತಿಸುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ ಎನ್ ಎಸ್ ವಕೀಲರಿಂದ**

ಕೃತ್ಯ ನಡೆಯಿತು ಎಂದು ಹೇಳಿದ ಸ್ಥಳಕ್ಕೆ ಚೆಕ್ ಪೋಸ್ಟ್ ಕರ್ತವ್ಯಕ್ಕೆ ನೇಮಿದ್ದರು ಎಂದು ಹೇಳಿದ್ದು, ಯಾವ ಉದ್ದೇಶಕ್ಕೆ ಚೆಕ್ ಪೋಸ್ಟ್ ಮಾಡಲಾಗಿತ್ತು ಎಂದರೆ ಸಾಕ್ಷಿಯು ಬಕ್ರೀದ್ ಹಬ್ಬದ ಪ್ರಯುಕ್ತ ಹಸುಗಳನ್ನು ಕಸಾಯಿ ಖಾನೆಗೆ ಸಾಗಿಸುವ ಉದ್ದೇಶ ಇರುತ್ತದೆ ಎಂದು ನನ್ನನ್ನು ಮತ್ತು ಇನ್ನಿತರ ಸಿಬಬಂದಿಗಳನ್ನು ನೇಮಿಸಲಾಗಿತ್ತು ಎನ್ನುತ್ತಾರೆ. ಯಾವ ಪಾಳಿ ಸಮಯದಲ್ಲಿ ಕರ್ತವ್ಯಕ್ಕೆ ನೇಮಿಸಲಾಗಿತ್ತು ಎಂದರೆ ಸಾಕ್ಷಿಯು ರಾತ್ರಿ 8.00 ರಿಂದ ಬೆಳಿಗ್ಗೆ 8.00 ಎನ್ನುತ್ತಾರೆ. ಆರೋಪಿಯು ಟಾಟಾ ಏಸ್ ವಾಹನದಲ್ಲಿ ತುಂಬಿ ಹೋಗುತ್ತಿದ್ದರು ಎಂದು ತಾವು ಪಿರ್ಯಾದು ನೀಡಿದ್ದು ಟಾಟಾ ಏಸ್ ವಾಹನವನ್ನು ತಪಾಸಣೆಗೆಂದು ತಡೆದಾಗ ಸ್ಥಳದಲ್ಲಿ ವಿಡಿಯೋ ಚಿತ್ರೀಕರಣ ಮಾಡಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಓಡಿ ಹೋದ ವ್ಯಕ್ತಿಯ ಚಹರೆ ವಹರೆ ಬಗ್ಗೆ ತಮ್ಮ ದೂರಿನಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಓಡಿ ಹೋದ ವ್ಯಕ್ತಿಯನ್ನು ಹಿಡಿಯಲು ಪ್ರಯತ್ನ ಪಟ್ಟಿದ್ದೀರಾ ಎಂದರೆ ಇಲ್ಲ ಎನ್ನುತ್ತಾರೆ. ಆರೋಪಿ ಹೆಸರು ಅನ್ಸಾರಿ ಎಂದು ಪಿರ್ಯಾದಿನಲ್ಲಿ ಹೇಳಿದ್ದು, ಆತನ ನಿಜವಾದ ಹೆಸರು ರಫೀಕ್ ಅಹಮದ್ ಖಾನ್ ಎಂದು ಇರುತ್ತದೆ ಎಂದರೆ ಸಾಕ್ಷಿಯು ಆರೋಪಿಯ ಹೆಸರನ್ನು ನಾನು ಹೇಳಿಲ್ಲ, ಬದಲಾಗಿ 1 ನೇ ಆರೋಪಿ ಎಂದು ಹೇಳಿರುತ್ತೇನೆ ಎನ್ನುತ್ತಾರೆ. ತಾವು ಅಮಾನತ್ತುಪಡಿಸಿಕೊಂಡ ಹಸುಗಳು ಯಾವ ಬಣ್ಣದ್ದು ಎಂದರೆ ಸಾಕ್ಷಿಯು ಬಿಳಿಯ ಬಣ್ಣದ್ದು ಎನ್ನುತ್ತಾರೆ. ಪಂಚನಾಮೆ ಮಾಡುವ ಕಾಲಕ್ಕೆ ಎಷ್ಟು ಜನ ಸೇರಿಕೊಂಡಿದ್ದೀರಿ ಎಂದರೆ ಸಾಕ್ಷ್ಮಿ ನಾನು ಮತ್ತು ಚಾಸಾ 8 ಎನ್ನುತ್ತಾರೆ. ಸ್ಥಳ

ಮಹಜರನ್ನು ಘಟನೆ ನಡೆದ ಬೆಳಗಿನ ಜಾವ, ಅಮಾನತ್ತು ಮಹಜರನ್ನು ದಾಳಿ ಮಾಡಿದ ಸಮಯಕ್ಕೆ ಅಂದರೆ 10.30 ರಿಂದ 11.30 ರ ಆಸು ಪಾಸು ಮಾಡಿರುತ್ತೇವೆ. ಘಟನೆ ನಡೆಯಿತುಎ ಎಂದು ಹೇಳಿದ ಸ್ಥಳಕ್ಕೆ ನಿಯೋಜನೆಗೊಂಡಿರಲಿಲ್ಲ, ಅಲ್ಲಿ ಯಾವುದೇ ವಾಹನವನ್ನು ತಪಾಸಣೆ ಮಾಡಿಲ್ಲ, ನಿಪಿ 4 ರಿಂದ 6 ರಲ್ಲಿ ಕಾಣುವ ಹಸುಗಳನ್ನು ಮತ್ತು ವಾಹಾನವನ್ನು ಅಮಾನತ್ತು ಪಡಿಸಿಕೊಂಡಿಲ್ಲ. ಬದಲಾಗಿ ಠಾಣೆಯಲ್ಲಿ ಕುಳಿತು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ . ಘಟನೆ ನಡೆಯಿತು ಎಂದು ಹೇಳಿದ ಸ್ಥಳದಲ್ಲಿ ಆರೋಪಿ ಮತ್ತು ವಾಹನ ಇರಲಿಲ್ಲ ಎಂದರೆ ಸರಿಯಲ್ಲ. ಠಾಣಾ ಅಂಕಿ ಅಂಶಕ್ಕಾಗಿ ಸುಳ್ಳು ದೂರು ದಾಖಲು ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ಬಿ.ಎನ್.ಉಷಾರಾಣಿ )
**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ಸಿ,**
**ಚನ್ನಪಟ್ಟಣ.**

**ವಾಟೀ ಸವಾಲುಃ ಆರೋಪಿತರ ಪರ ಶ್ರೀ. ., ವಕೀಲರಿಂದಃ**

4.

5.

**ಮರುವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ಬಿ.ಎನ್.ಉಷಾರಾಣಿ )
**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ಸಿ,**
**ಚನ್ನಪಟ್ಟಣ.**

(ಈ ಹಂತದಲ್ಲಿ ಸದರಿ ಸಾಕ್ಷಿಯು ಅಭಿಯೋಜನ ಪಕ್ಷದ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿಯುತ್ತಿಲ್ಲವಾದ ಕಾರಣ ಆತನನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದರ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅಭಿಯೋಜಕರ ವಾಟೀ ಸವಾಲಿಗೆ ಅನುಮತಿ ನೀಡಲಾಗಿದೆ.)

ವಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ ಃ